**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ಸತ್ರ ಮೊಕದ್ದಮೆ ಸಂಖ್ಯೆಃ- 30/2024</u>**

**ಪ್ರಾಸಾಃ- 1 ಚಾಸಾಃ- 1**

| | | |
|---|---|---|
| ಸಾಕ್ಷಿಯ ಹೆಸರು | : | ಮಲ್ಲಯ್ಯ |
| ತಂದೆಯ ಹೆಸರು | : | ಲೇಟ್ ಈರಣ್ಣ |
| ವಯಸ್ಸು | : | 37 ವರ್ಷ |
| ವೃತ್ತಿ | : | ಕಾರು ಚಾಲಕ |
| ವಾಸಸ್ಥಳ | : | ದೇಶನೂರು, ಸಿರುಗುಪ್ಪ ತಾಲ್ಲೂಕು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 2.6.2026**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ಚಾಸಾ 2 ನನ್ನ ತಮ್ಮ. ಚಾಸಾ 3 ನನ್ನ ಅಣ್ಣನ ಮಗ. ಚಾಸಾ 4 ನನ್ನ ತಮ್ಮ. ಚಾಸಾ 5 ನನ್ನ ಅಣ್ಣ. ಚಾಸಾ 8 ನನ್ನ ಹೆಂಡತಿ. ಚಾಸಾ 5 ರಿಂದ 7, 9 ರಿಂದ 14 ರವರು ಗೊತ್ತು. ಮೃತ ಈರಪ್ಪ ನನ್ನ ತಂದೆ. ಮೃತ ತಾಯಮ್ಮ ನನ್ನ ತಾಯಿ. ನನಗೆ ನ್ಯಾಯಾಲಯದಲ್ಲಿ ಇರುವ ಆರೋಪಿ ಪರಿಚಯ ಇಲ್ಲ.

ನನ್ನ ತಾಯಿ ಮೂತ್ರ ವಿಸರ್ಜನೆಗೆ ಹೋದಾಗ ಬಂಡೆಯಿಂದ ಬಿದ್ದು ಕಾಲು ಜಾರಿ ತೀರಿಕೊಂಡಿರುತ್ತಾರೆ. ಆರೋಪಿಗೂ ಅದಕ್ಕೂ ಸಂಬಂಧ ಇಲ್ಲ. ಆದರೆ ಪೋಲೀಸರು ಹೇಳಿದ ಪ್ರಕಾರ ಅವರು ತಯಾರು ಮಾಡಿದ ದೂರಿಗೆ ಸಹಿ ಹಾಕಿ ಕೊಟ್ಟಿದ್ದೇನೆ. ಅದನ್ನು ನಾನು ಹೇಳಿ ಬರೆಸಿಲ್ಲ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ ದೂರನ್ನು ನಿಪಿ-1 ಹಾಗೂ ಅವರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೋಲೀಸರು ಸ್ಥಳಕ್ಕೆ ಬಂದು ನನ್ನ ಸಮಕ್ಷಮ ಸ್ಥಳ ಪಂಚನಾಮೆ ಮಾಡಿಲ್ಲ. ಆದರೆ ನನ್ನ ಸಹಿ ಹಾಕಿಸಿಕೊಂಡಿದ್ದಾರೆ. ನನ್ನ ಸಮಕ್ಷಮ ಯಾವುದೇ ಕಚ್ಚಾ ನಕಾಶೆಯನ್ನು ತಯಾರು ಮಾಡಿಲ್ಲ ಮತ್ತು ಪೋಟೋ ತೆಗೆದಿಲ್ಲ. ಆದರೆ ಅವರಿಗೆ ಬೇಕಾದಂತೆ ಸಹಿ ಹಾಕಿಸಿಕೊಂಡಿದ್ದಾರೆ. ನನ್ನ ತಾಯಿಯ ಮರಣೋತ್ತರ ಪರೀಕ್ಷೆಯಾದ ನಂತರ ಮೃತ ದೇಹವನ್ನು ನನ್ನ ವಶಕ್ಕೆ ಪಡೆದು ರಸೀದಿಯಲ್ಲಿ ಸಹಿ ಹಾಕಿದ್ದೇನೆ. ಈಗ ತೋರಿಸುತ್ತಿರುವ ಪೋಟೋದಲ್ಲಿ ನನ್ನ ತಾಯಿಯ ಮೃತ ದೇಹ ಕಾಣಿಸುತ್ತದೆ.

ಸಾಕ್ಷಿಯು ಸ್ಥಳ ಪಂಚನಾಮೆ, ಸ್ಥಳ ನಕ್ಷೆ, ರಸೀದಿಯುಲ್ಲಿರುವ ಸಹಿಗಳನ್ನು ಗುರುತಿಸಿರುವ ಕಾರಣ ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 4 ಎಂದು, ಸಹಿಗಳನ್ನು ನಿಪಿ-2(ಎ), ನಿಪಿ-3(ಎ) ಮತ್ತು ನಿಪಿ-4(ಎ) ಎಂದು ಗುರುತಿಸಲಾಯಿತು.

ಪೋಲೀಸರು ಸ್ಥಳಕ್ಕೆ ಬಂದಾಗ ಯಾವುದಾದರೂ ವಸ್ತುಗಳನ್ನು ಅಮಾನತ್ತು ಮಾಡಿಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ಮೂರು ಪೋಟೋಗಳನ್ನು ನಿಪಿ-5 ರಿಂದ 7 ಎಂದು ಗುರುತಿಸಲಾಯಿತು.

ಈಗ ತೋರಿಸುತ್ತಿರುವ ಉದ್ದನಾದ ಗಡಾರಿಯ ಬಗ್ಗೆ ನನಗೆ ಗೊತ್ತಿಲ್ಲ. ಆದ್ದರಿಂದ ಅದನ್ನು ಗುರುತಿಸಲು ಆಗುವುದಿಲ್ಲ. ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ಆರೋಪಿಯ ಮನೆ ನಮ್ಮ ಮನೆಯ ಎದುರುಗಡೆ ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಯಾವಾಗಲೂ ನನ್ನ ಹೆಂಡತಿಯನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದು ಆ ವಿಚಾರವನ್ನು ನನ್ನ ಹೆಂಡತಿ ನನಗೆ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರದಲ್ಲಿ ನಾವೆಲ್ಲರೂ ಸೇರಿ ಆರೋಪಿಗೆ ಹೆಣ್ಣು ಮಕ್ಕಳನ್ನು ಕೆಟ್ಟದಾಗಿ ನೋಡಬಾರದೆಂದು ಬುದ್ದಿವಾದ ಹೇಳಿದೆವು ಎಂದರೆ ಸರಿಯಲ್ಲ. ನಮ್ಮ ತಾಯಿ ಕೊಲೆ ಆಗುವ ಕಾಲಕ್ಕೆ 15 ದಿವಸಗಳ ಹಿಂದೆ ನನ್ನ ಮಗಳು ಋತುಮತಿ ಆಗಿದ್ದಳು ಎಂದರೆ ಸರಿಯಲ್ಲ. ಆಗಲೂ ಸಹ ಆರೋಪಿಯೂ ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮಗೂ ಮತ್ತು ಆರೋಪಿಗೂ ಜಗಳ ಆಗಿತ್ತು ಮತ್ತು ಅದರಿಂದ ಆರೋಪಿ ನಮ್ಮ ಮೇಲೆ ವೈಮನಸ್ಸು ಹೊಂದಿದ್ದರು ಎಂದರೆ ಸರಿಯಲ್ಲ.

ದಿಃ 12-1-2024 ರಂದು ಬೆಳಗಿನಜಾವ 2-30 ಗಂಟೆಗೆ ನನ್ನ ತಾಯಿ ಮೂತ್ರ ವಿಸರ್ಜನೆ ಮಾಡಲು ಚಾಸಾ 3 ರವರ ಜೊತೆ ಹೊರಗಡೆ ಹೋದಾಗ ಆರೋಪಿ

ಮನೆಯ ಹೊರಗಡೆ ನಿಂತು ನನ್ನ ತಾಯಿಯನ್ನು ನೋಡುತ್ತಿದ್ದಾಗ ನನ್ನ ತಾಯಿ ಆತನನ್ನು ಕುರಿತು ಏಕೆ ಇಲ್ಲಿ ನಿಂತಿದ್ದೀಯಾ ಎಂದು ಕೇಳಿದಾಗ ಆರೋಪಿ ನನ್ನ ತಾಯಿಯನ್ನು ಅವಾಚ್ಯ ಶಬ್ದಗಳಿಂದ ಬೈದಾಗ ಗಲಾಟೆ ಶಬ್ದ ಕೇಳಿ ನಾವೆಲ್ಲಾ ಹೊರಗಡೆ ಬಂದೆವು ಎಂದರೆ ಸರಿಯಲ್ಲ. ಆಗ ಆರೋಪಿ ತನ್ನ ಜೇಬಿನಿಂದ ಕಾರದ ಪುಡಿ ತೆಗೆದುಕೊಂಡು ಕೈಯಲ್ಲಿ ಮು ಮಾ 1 ಹಾರೆಯನ್ನು ತೆಗೆದುಕೊಂಡು ನನ್ನ ತಾಯಿಯನ್ನು ಕುರಿತು ಈ ದಿವಸ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಕೂಗಾಡುತ್ತಾ ಮು ಮಾ 1 ಹಾರೆಯಿಂದ ನನ್ನ ತಾಯಿಯ ತಲೆಯ ಹಿಂಭಾಗಕ್ಕೆ ಹೊಡೆದಾಗ ನನ್ನ ತಾಯಿ ಗಾಯಗೊಂಡು ಕೆಳಗೆ ಬಿದ್ದರು ಎಂದರೆ ಸರಿಯಲ್ಲ. ಆಗ  ನಾನು, ಚಾಸಾ 2 ಮತ್ತು 3 ರವರು ಬಿಡಿಸಲು ಹೋದಾಗ ಚಾಸಾ 2 ರವರ ಮೇಲೆ ಆರೋಪಿ ಕಾರದ ಪುಡಿ ಎರಚಿ ಅದೇ ಹಾರೆಯಿಂದ ಆತನ ತಲೆ ಮತ್ತು ಬಲ ತೊಡೆ ಹಾಗೂ ಎಡಗೈಗೆ ಹೊಡೆದು ರಕ್ತ ಗಾಯ ಉಂಟು ಮಾಡಿದ್ದ ಎಂದರೆ ಸರಿಯಲ್ಲ. ಗಲಾಟೆ ಶಬ್ದ ಕೇಳಿ ಚಾಸಾ 9, 10, 7 ಮತ್ತು 6 ರವರು ಅಲ್ಲಿಗೆ ಬಂದಾಗ ಆರೋಪಿ ಮು ಮಾ 1 ನ್ನು ಹಿಡಿದುಕೊಂಡು ಮಸೀದಿಯ ಕಡೆಗೆ ಓಡಿ ಹೋದನು ಎಂದರೆ ಸರಿಯಲ್ಲ. ನಂತರ ಎಚ್ಚರ ತಪ್ಪಿ ಬಿದ್ದಿದ್ದ ನಮ್ಮ ತಾಯಿಗೆ ಬಲವಾದ ಗಾಯ ಆಗಿ ರಕ್ತ ಸೋರುತ್ತಿದ್ದು ಚಾಸಾ 2 ರವರಿಗೂ ತಲೆಗೆ ಗಾಯ ಆಗಿ ರಕ್ತ ಸೋರುತ್ತಿದ್ದುದರಿಂದ ಇಬ್ಬರನ್ನೂ ನಮ್ಮ ಆಟೋದಲ್ಲಿ ಸಿರುಗುಪ್ಪ ಸರಕಾರಿ ಆಸ್ಪತ್ರೆಗೆ  ಕರೆದುಕೊಂಡು ಹೋಗಿ ದಾಖಲಿಸಿದೆವು ಎಂದರೆ ಸರಿಯಲ್ಲ. ಅಲ್ಲಿದ್ದ ವೈದ್ಯರ ನನ್ನ ತಾಯಿಯನ್ನು ಪರೀಕ್ಷೆ ಮಾಡಿ ಅದಾಗಲೇ ನನ್ನ ತಾಯಿ ಮೃತ ಪಟ್ಟಿದ್ದಾರೆ ಎಂದು ತಿಳಿಸಿದ್ದು ನನ್ನ ತಮ್ಮನಿಗೆ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟರು ಎಂದರೆ ಸರಿಯಲ್ಲ.

ನನ್ನ ತಾಯಿಯನ್ನು ಆರೋಪಿಯೇ ಮು ಮಾ 1 ರಿಂದ ಹೊಡೆದು ಕೊಲೆ ಮಾಡಿದ್ದು ಚಾಸಾ 2 ರವರಿಗೂ ಸಹ ಅದೇ ಮು ಮಾ 1 ರಿಂದ ಹೊಡೆದು ರಕ್ತ ಗಾಯಪಡಿಸಿದ್ದು ಆ ವಿಚಾರದ ಬಗ್ಗೆ ನಾನು ಖುದ್ದು ದಿಃ 12-1-2024 ರಂದು ಬೆಳಿಗ್ಗೆ 9-30 ಗಂಟೆಗೆ ಠಾಣೆಗೆ ಹೋಗಿ ನಿಪಿ-1 ರ ಬೆರಳಚ್ಚು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಅದೇ ದಿವಸ ಸಂಜೆ 5-00 ಗಂಟೆಗೆ ಪೋಲೀಸರು ನಮ್ಮ ಮನೆಯ ಬಳಿ ಬಂದಿದ್ದು ಅಲ್ಲಿ ನಾನು ತೋರಿಸಿದ ಜಾಗದಲ್ಲಿ ಚಾಸಾ 13 ಮತ್ತು 14

ರವರನ್ನು ಬರಮಾಡಿಕೊಂಡು ಅವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಕ್ರಮ ಜರುಗಿಸಿ ನಿಪಿ-3 ರ ಕಚ್ಚಾ ನಕಾಶೆಯನ್ನು ತಯಾರು ಮಾಡಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-6 ಮತ್ತು 7 ರ ಫೋಟೋ ತೆಗೆದರು ಎಂದರೆ ಸರಿಯಲ್ಲ. ಸದರಿ ಫೋಟೋಗಳಲ್ಲಿ ನಾನು ಕಾಣಿಸುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ರಕ್ತ ಹತ್ತಿದ ಹತ್ತಿಯ ತುಂಡು, ರಕ್ತ ಹತ್ತದ ಹತ್ತಿಯ ತುಂಡು ಹಾಗೂ ಕಾರದ ಪುಡಿ ಜಪ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ಅವುಗಳನ್ನು ಈಗ ಸಾಕ್ಷಿಗೆ ತೋರಿಸಿದಾಗ ಸಾಕ್ಷಿಯು ಅವುಗಳನ್ನು ಗುರುತಿಸಿಲ್ಲ. ಅವುಗಳನ್ನು ಕ್ರಮವಾಗಿ ಮು ಮಾ 2 ರಿಂದ 4 ಎಂದು ಗುರುತಿಸಲಾಯಿತು.

ಮೇಲೆ ಹೇಳಿದ ಎಲ್ಲಾ ವಿಚಾರಗಳು ಸತ್ಯವಾಗಿದ್ದರೂ ಸಹ ಆರೋಪಿಯೇ ನನ್ನ ತಾಯಿಯನ್ನು ಕೊಲೆ ಮಾಡಿ ನನ್ನ ತಮ್ಮನಿಗೆ ಗಾಯಪಡಿಸಿದ್ದರು ಸಹ ಈಗ ಆರೋಪಿ ಜೊತೆ ಶಾಮಿಲಾಗಿ, ರಾಜಿ ಮಾಡಿಕೊಂಡು ಕೇಸಿನಲ್ಲಿ ಆತನಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಬಿ ಕೆ ವಕೀಲರಿಂದಃ</u>

ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ಸತ್ರ ಮೊಕದ್ದಮೆ ಸಂಖ್ಯೆಃ- 30/2024</u>**

**ಪ್ರಾಸಾಃ- 2 ಚಾಸಾಃ- 5**

| | | |
|---|---|---|
| ಸಾಕ್ಷಿಯ ಹೆಸರು | : | ರಾಘವೇಂದ್ರ |
| ತಂದೆಯ ಹೆಸರು | : | ಲೇಟ್ ಈರಣ್ಣ |
| ವಯಸ್ಸು | : | 38 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ದೇಶನೂರು, ಸಿರುಗುಪ್ಪ ತಾಲ್ಲೂಕು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 2.6.2026**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ಚಾಸಾ 1 ಮತ್ತು 2 ನನ್ನ ತಮ್ಮಂದಿರು. ಚಾಸಾ 8 ನನ್ನ ತಮ್ಮನ ಹೆಂಡತಿ. ಉಳಿದ ಸಾಕ್ಷಿದಾರರ ಪರಿಚಯ ಇದೆ. ಈಗ ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಾಗಿರುವ ಆರೋಪಿ ನಮ್ಮ ಊರಿನವರೇ. ನಮ್ಮ ತಾಯಿ ತಾಯವ್ವ ಈಗ ಜೀವಂತ ಇಲ್ಲ. ನಮ್ಮ ತಾಯಿ ಹೇಗೆ ತೀರಿಕೊಂಡರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆಸ್ಪತ್ರೆಗೆ ಹೋದ ನಂತರ ಗೊತ್ತಾಯಿತು. ಆರೋಪಿ ನಮ್ಮ ಹೆಣ್ಣು ಮಕ್ಕಳ ಮೇಲೆ ಕೆಟ್ಟ ದೃಷ್ಟಿಯಿಂದ ನೋಡುತ್ತಿರಲಿಲ್ಲ ಮತ್ತು ನನ್ನ ತಾಯಿ ಸಾವಿಗೂ ಮತ್ತು ಆರೋಪಿಗೂ ಸಂಬಂಧ ಇಲ್ಲ. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಈ ಕೇಸಿನ ಬಗ್ಗೆ ನನಗೇನು ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

ಈಗ ಓದಿ ಹೇಳಿದಂತೆ ದಿಃ 12-1-2024 ರಂದು ಪೋಲೀಸರು ನನ್ನನ್ನು ವಿಚಾರಿಸಿದಾಗ " ನಾನು ---- ಪೋಲೀಸ್ ಠಾಣೆಯಲ್ಲಿ ದೂರು ನೀಡಿದೆನು “

ಎನ್ನುವ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯಲ್ಲಿ ಹೇಳಿರುವಂತೆ ಆರೋಪಿಯು ನಮ್ಮ ಮನೆಯ ಎದುರುಗಡೆ ಇದ್ದು ಯಾವಾಗಲೂ ನಮ್ಮ ಹೆಣ್ಣು ಮಕ್ಕಳನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದ ಆ ವಿಚಾರದಲ್ಲಿ ಕೇಳಿದಾಗ ಜಗಳ ಆಗಿ ನಮ್ಮ ಮೇಲೆ ದ್ವೇಷ ಹೊಂದಿದ್ದರು ಎಂದರೆ ಸರಿಯಲ್ಲ. ದಿಃ 12-1-2024 ರಂದು ಬೆಳಗಿನಜಾವ ನನ್ನ ತಾಯಿ ಚಾಸಾ 3 ರವರ ಜೊತೆ ಮೂತ್ರ ವಿಸರ್ಜನೆಗೆ ಹೋದಾಗ ಆರೋಪಿ ನನ್ನ ತಾಯಿಗೆ ಹಾರೆಯಿಂದ ಹೊಡೆದು ಕೊಲೆ ಮಾಡಿದ ವಿಚಾರ ನನಗೆ ಗೊತ್ತಾಗಿದ್ದು ಅದನ್ನು ತಿಳಿದುಕೊಂಡು ನಿಪಿ-8 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿ ಜೊತೆ ರಾಜಿ ಮಾಡಿಕೊಂಡು ಕೇಸಿನಲ್ಲಿ ಆತನಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಬಿ ಕೆ ವಕೀಲರಿಂದಃ</u>

ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**